JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# “ತುಂಬಾಡಿ ರಾಮಯ್ಯನವರ ಮಣೆಗಾರ ಆತ್ಮಚರಿತ್ರೆಯಲ್ಲಿನ ಸಂಕಟಗಳ ಚಿತ್ರಣ”

**ಮುನಿರಾಜು ಕೆ**

**ಸಹಾಯಕ ಪ್ರಾಧ್ಯಾಪಕರು,**

**ಸರ್ಕಾರಿ ಪ್ರಥಮ ದರ್ಜೆ ಕಾಲೇಜು**

**,ಕೊರಟಗೆರೆ, ತುಮಕೂರು ಜಿಲ್ಲೆ-572129**

ಸಾಹಿತ್ಯ ಎಂಬುದು ನಿಂತ ನೀರಲ್ಲ. ಅದರಲ್ಲಿ ಹೊಸ ಜಿನುಗುಗಳು ಕಾಣಿಸಿಕೊಳ್ಳುತ್ತವೆ. ಆ ಜಿನುಗುಗಳಲ್ಲಿ ಎಪ್ಪತ್ತರ ದಶಕದಲ್ಲಿ ಕಂಡುಬಂದುದು ದಲಿತ ಸಾಹಿತ್ಯ. ದಲಿತ ತಾನು ಕಂಡ,ಅನುಭವಿಸಿದ ಜೀವನದ ಒಂದು ಅನೇಕ ತುಡಿತಗಳ ಪ್ರತಿಧ್ವನಿ, ಸಂವೇದನೆ ದಲಿತ ಸಾಹಿತ್ಯ. ಇದು ಎಲ್ಲ ಸಾಹಿತ್ಯದಂತೆ ಕಥೆ, ಕಾವ್ಯ,ಕಾದಂಬರಿ,,ನಾಟಕ ಮತ್ತು ಆತ್ಮಚರಿತ್ರೆ ಮುಂತಾದ ಎಲ್ಲ ಸಾಹಿತ್ಯ ಪ್ರಕಾರಗಳನ್ನು ಒಳಗೊಳ್ಳುತ್ತದೆ. ಈ ಪ್ರಬಂಧದಲ್ಲಿ ತುಂಬಾಡಿ ರಾಮಯ್ಯನವರ 'ಮಣೆಗಾರ' ಆತ್ಮಚರಿತ್ರೆಯಲ್ಲಿ ದಲಿತರ ಬದುಕಿನ ಒಳನೋಟಗಳನ್ನು ಕುರಿತು ಚರ್ಚಿಸಲಾಗಿದೆ.

ದಲಿತ ಆತ್ಮಚರಿತ್ರೆಗಳು ಮರಾಠಿ ದಲಿತ ಆತ್ಮಚರಿತ್ರೆಗಳಿಂದ ಪ್ರಭಾವಿತವಾಗಿದ್ದರೂ ಒಂದು ಹೊಸ ವಿಶಿಷ್ಟತೆಯನ್ನು ಹೊಂದಿವೆ. ಕನ್ನಡದ ಮೊದಲ ದಲಿತ ಆತ್ಮಚರಿತ್ರೆ 'ಗೌರ್ನಮೆಂಟ್ ಬ್ರಾಹ್ಮಣ', ಸಿದ್ಧಲಿಂಗಯ್ಯನವರ 'ಊರುಕೇರಿ, ಕೆ. ಗೋವಿಂದರಾಜು ರವರ 'ಮನವಿಲ್ಲದವರ ಮಧ್ಯೆ' ಮುನಿವೆಂಕಟಪ್ಪನವರ 'ಅಂತ್ಯಜನ ಅಂತರಂಗ' ಸಿ.ಜಿ. ಕೃಷ್ಣಸ್ವಾಮಿ ಅವರ ಕತ್ತಾಲೆಬೆಳದಿಂಗಳೊಳಗ, ತುಂಬಾಡಿ ರಾಮಯ್ಯನವರ ಮಣೆಗಾರ ಮುಂತಾದವನ್ನು ಕಾಣುತ್ತೇವೆ.

ಎಲ್ಲ ಆತ್ಮಚರಿತ್ರೆಗಳಂತೆ 'ಮಣೆಗಾರ' ವ್ಯಕ್ತಿಯ ಉದಾತ್ತ ಗುಣವನ್ನು ಚಿತ್ರಿಸುವ ಕೃತಿಯಲ್ಲ. ಇದು ಒಂದುಸಮಾಜ ಪ್ರಜ್ಞೆಯ ಇಡೀ ಸಮುದಾಯದ ಬದುಕಿನ ಭಾಗವಾಗಿ ಅನಾವರಣಗೊಂಡಿರುವುದನ್ನು ಕಾಣುತ್ತೇವೆ. ಇಲ್ಲಿ ಅನೇಕ ಒಳನೋಟಗಳನ್ನು,ಸಾಂಸ್ಕೃತಿಕ ತುಡಿತಗಳನ್ನು ಕಾಣಬಹುದು. ಅಸ್ಪೃಶ್ಯತೆಯ ಘೋರ ಅನುಭವ, ಹಸಿವಿನ ಸಂಕಟ, ಬಡತನದ ಕಹಿ,ದಲಿತರ ಬದುಕನ್ನು ಆವರಿಸಿರು ಮೌಢ್ಯತೆ ಹಳ್ಳಿಗಳಲ್ಲಿರುವ ವಿಭಿನ್ನ ಜಾತಿ ಸಮುದಾಯಗಳು ಅಲ್ಲಿನ ಒಳಪಂಗಡಗಳು-ಬೆಡಗುಗಳು ಸಾಮಾಜಿಕ ಸಂಬಂಧಗಳು,ಆ ಜನರ ಪ್ರೇಮ ಅನಕ್ಷರತೆ

ಒಳಗೊಂಡಿದೆ. ಇದು ರಾಮಯ್ಯನವರ ಆತ್ಮಕಥನ ಮಾತ್ರ ಆಗಿರದೆ ಸೃಜನಶೀಲತೆಯ ಭಾಗವಾಗಿ ಒಂದುಜನಾಂಗದ ಅಂತಿಮವಾಗಿ ಒಂದು ಗ್ರಾಮದ ಆತ್ಮಕಥನವಾಗಿ ರೂಪಾಂತರಗೊಂಡಿದೆ.

ಈ ಆತ್ಮಚರಿತ್ರೆಯಲ್ಲಿ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ಬಾಲ್ಯಜೀವನ ಮತ್ತು ಎರಡನೇ ಭಾಗದಲ್ಲಿ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತನಾಗಿರುವ ಚಿತ್ರಣವನ್ನು ಕಾಣಬಹುದಾಗಿದೆ.ರಾಮಯ್ಯನವರ ಕುಟುಂಬ ಮಣೆಗಾರ(ಮಾದಿಗ) ಜಾತಿಗೆ ಸೇರಿದವರಾಗಿದ್ದು ಬಾಲ್ಯದಲ್ಲಿ ಕಂಡ ಅನುಭವಗಳನ್ನು ಚಿತ್ರಿಸಿದ್ದಾರೆ. ಚಪ್ಪಲಿ ಹೊಲಿಯುವ ಕಾಯಕ ಮಾಡುವುದು ರಾಮಯ್ಯ್ಯನವರ ತಂದೆಯ ಕಸುಬು ,ಇಡೀ ಜನಾಂಗದಲ್ಲಿ ಬಹುತೇಕರು ಇದೇ ವೃತ್ತಿಯನ್ನು ಮುಖ್ಯವಾಗಿ ಮಾಡುತ್ತಿದ್ದ ಕಸುಬು.

'ಈ ಇಕ್ರ ಕಟ್ಟಿದವರು ಯಾರು' ಎಂಬ ಅಧ್ಯಾಯದಲ್ಲಿ ದಲಿತರ ಮನೆಗಳಲ್ಲಿ ಬಡತನ ಹೇಗಿತ್ತು ಎನ್ನುವುದನ್ನು ಚಿತ್ರಿಸಿದ್ದಾರೆ. ಮಲಗಲು ಮನೆಯಿಲ್ಲ ತಿನ್ನಲು ಊಟವಿಲ್ಲದ ಪರಿಸ್ಥಿತಿ. ಉಯ್ಯುವ ಮಳೆ ಅಂತಹ ಪರಿಸ್ಥತಿಯಲ್ಲಿ ಮನೆ ಕಟ್ಟಿಕೊಳ್ಳಲು ತುಂಬಾಡಿಯ ಜನ ಸ್ಪಂದಿಸಿದ ಚಿತ್ರಣ ನೋಡಬಹುದು. ಗೊಲ್ಲರ ಕಾವಲಪ್ಪ ಸರ್ಕಾರದಿಂದ ಸಾಲಕೊಡಿಸಲು ಮನೆ ಕಟ್ಟಕ್ಕೆ ಮರದ ತೊಲೆಗಳನ್ನು ನಾಗಣ್ಣ ಕೊಟ್ಟದ್ದು,ಕುರಿಮಲ್ಲಪ್ಪನೋರ ಈರನಾಗಪ್ಪ ಜಂತೆ ನಿರ್ಮಾಣ ಮಾಡಿದ್ದು,ಮನೆಗೊಬ್ಬರು ಮಣ್ಣಿನ ಮುದ್ದೆ ಹಾಕಕ್ಕೆ ಬಂದಿದ್ದು, ಕುಂಚಿಟಿಗರ ಲಕ್ಕಮ್ಮ ಇಟ್ಟು ಬೇಯಿಸಿ ಹಾಕಿದ್ದು ಎಂಬಲ್ಲಿ ಗ್ರಾಮದಲ್ಲಿ ಜನ ಮಾನವೀಯತೆಯಿಂದ ಹೇಗೆಒಬ್ಬರಿಗೊಬ್ಬರು ಸ್ಪಂದಿಸುತ್ತಾರೆ ಎಂಬುದನ್ನು ಚಿತ್ರಿಸಿದ್ದಾರೆ.

ಎಂಟೆತ್ತು ಜನ ಇರುವ ಕುಟುಂಬದಲ್ಲಿ ಹಸಿವಿನ ಸಂಕಟ ತೀವ್ರವಾಗಿ ಬಾಧಿಸುತ್ತಿತ್ತು, ಅಂಥಹ ಸಂದರ್ಭದಲ್ಲಿ ರಾಮಯ್ಯನ ತಂದೆ ಎದುರಿಸುವ ಸಮಸ್ಯೆಗಳು ಅವತಾರಗಳು ಹಲವು.ಚಪ್ಪಲಿ ಹೊಲೆಯುವುದು, ಹಂದಿ ಸಾಕುವುದು,ತಮಟೆ ಬಾರಿಸುವುದು,ಕೂಲಿ ಮಾಡುವುದು,ಏನೇ ಕೆಲಸ ಮಾಡಿದರೂ ಹಸಿವಿನ ಸಂಕಟ ಕಡಿಮೆಯಾಗುತ್ತಿರಲಿಲ್ಲ.ಚಪ್ಪಲಿ ಕಾಯಕಕ್ಕೆ ಮಧುಗಿರಿ ಸಂತೆಗೆ ಹೋಗಿ ಟೈರು,ಮೊಳೆ,ಚಪ್ಪಲಿ ತಯಾರಿಕೆಯ ಪರಿಕರಗಳನ್ನು ತಂದು ಚಪ್ಪಲಿ ರೆಡಿ ಮಾಡಿ, ಮಧುಗಿರಿ ಸಂತೆ,ಕೊರಟಗೆರೆ ಸಂತೆ,ಅಕ್ಕಿರಾಂಪುರ ಸಂತೆ ಹಾಗೂ ಹಳ್ಳಿಗಳಲ್ಲಿ ಎಲ್ಲ ಕಡೆ ಸುತ್ತಿ ವ್ಯಾಪಾರ ಮಾಡಿದ್ದರೂ, ಆದಾಯ ಮಾತ್ರ ತೃಣ ಮಾತ್ರ. ಅರಕ್ಕೇರದ ಮೂರಕ್ಕಿಳಿಯದ ಸ್ಥಿತಿಯಾಗಿತ್ತು. ಬಹುತೇಕವಾಗಿ ದಲಿತರ ಸ್ಥಿತಿ ಇದೇ ಆಗಿತ್ತು, ಸಿದ್ದಲಿಂಗಯ್ಯನವರ ಊರುಕೇರಿಯಲ್ಲೂ ಊಟಕ್ಕಾಗಿ ಐನೋರಮನೆಗೆ ಊಟ ತೆಗೆದುಕೊಂಡು ಬರಲು ಹೋಗುವಂತೆ,ಇಲ್ಲಿ ಮಾನೋರ್ಮಿ ಹಬ್ಬದ ದಿನ ಊಟಕ್ಕೆ ಚಿಕ್ಕನರಸೀಯಪ್ಪನವರ ಮನೆಗೆ ಹೋಗುವುದು, ಎಲ್ಲ ಜಾತಿಯವರ ಊಟವಾದ ಮೇಲೆ ಇವರಿಗೆ ಊಟ. ಒಂದು ಬಾರಿ ವಿಪರೀತ ಮಳೆ ಆಗಿ ದೊಡ್ಡ ಹಳ್ಳ ತುಂಬಿ ಹರಿಯುತ್ತಿದ್ದರೂ, ಹಸಿವಿನಿಂದಾಗಿ ಚಿಕ್ಕನರಸಿಯಪ್ಪನವರ ಮನೆಗೆ ಪ್ರಾಣದ ಹಂಗು ತೊರೆದು ಊಟಕ್ಕೆ ಹೋದ ಪ್ರಸಂಗ ದಾಖಲಿಸಿದ್ದಾರೆ.

'ಒಂದೇಟು ಹೊಡೆದುಬಿಡು ಮಾಮ' ಪ್ರಸಂಗದಲ್ಲಿ ರಾಮಯ್ಯನವರು ಹೈಸ್ಕೂಲ್ ಓದುತ್ತಿದ್ದ ಸಂಧರ್ಭದಲ್ಲಿ ಉಂಟಾದ ಹಸಿವಿನ ಚಿತ್ರಣ, ಶಾಲೆಯಿಂದ ಬಂದ ಹುಡುಗ ಮನೆಯಲ್ಲಿ ಊಟ ಇಲ್ಲದ್ದನ್ನು ಕಂಡು ಹಸಿವನ್ನು ತಾಳಲಾರದೇ, ವಡ್ಡರ ವೆಂಕಟಪ್ಪನ ಹೊಲದಲ್ಲಿಕಡ್ಲೆಕಾಯಿ ಕಿತ್ತು ತಿನ್ನುತಿರುವಾಗ ಹೊಲದ ಒಡೆಯನಿಗೆ

ಸಿಕ್ಕಿಬಿದ್ದು,ಹೊಲೇರ ಮುದ್ದಹನುಮಪ್ಪನ ಹತ್ತಿರ ನ್ಯಾಯಕ್ಕೆ ಬಂದಾಗ,ಮುದ್ದಹನುಮಪ್ಪ ಹೋಗ್ಲಿಬಿಡು ವೆಂಕಟಪ್ಪ ಹುಡುಗ ಇಸ್ಕೂಲಿಗೆ ಹೋಗಿದ್ದ ವತ್ತಾರೆ ಉಂಡು ಹೋಗಿದ್ದನೋ ಇಲ್ಲವೋ,ಹೊಟ್ಟೆ ಹಸಿತ್ತಿತ್ತು ಅಂತಾ ಕಾಣತ್ತದೆ ಎರಡು ಕಾಯಿ ತಿಂದವನೇ ಅಂತ ಹೇಳಿದಾಗ ಹಸಿವಿನ ಸಂಕಟ ಮತ್ತು ಸ್ವಾಭಿಮಾನದ ತಳಮಳ ಚಿತ್ರಿತವಾಗಿದೆ.

'ಊಟಕ್ಕಾಗಿ ಪರದಾಟ' ಪ್ರಸಂಗದಲ್ಲಿ ಬಹುತೇಕ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಇದ್ದು ಓದುವಾಗ ಎದುರಾಗುವ ಪ್ರಸಂಗ,ರಾಮಯ್ಯ ಎಲ್ ಎಲ್ ಬಿ ಓದುವ ಸಂದರ್ಭದಲ್ಲಿ ಹಾಸ್ಟೆಲ್ ನಲ್ಲಿ ಊಟ ಸಿಗದ್ದಿದ್ದಾಗ ಹಸಿವಿನಿಂದ ಹಲವಾರು ದಿನಗಳು ಇರುವುದನ್ನು ಕಾಣಬಹುದು.ಮನೆಕಡೆ ಬಡತನ, ಹಾಸ್ಟೆಲ್ನಲ್ಲಿ ಊಟ ಇಲ್ಲದೇ ಪರದಾಡುವ ಪ್ರಸಂಗ ಹಸಿವಿನ ಸಂಕಟ ಎಷ್ಟು ತೀವ್ರವಾಗಿ ಬಾದಿಸುತ್ತಿತ್ತು ಎಂದರೇ ಎರಡು ಹೊತ್ತಿನ ಊಟವೂ ಸಿಗಲ್ಲಿಲ್ಲ ಎಂದೂ ಕಣ್ಣೀರು ತುಂಬಿದ ಕಂಗಳು. ಇಂಥಹ ಸಂದರ್ಭದಲ್ಲಿ ಮುನ್ಸಿಪಾಲಿಟಿಯಲ್ಲದ್ದ ರಂಗಸ್ವಾಮಯ್ಯನವರು ಇವರನ್ನು ನೋಡಿ ' ಬನ್ನಿ ಸಾ ಮನೆಗೋಗನ' ಎಂದು ಕರೆದುಕೊಂಡು ಹೋಗಿಕೈತೊಳಿರಿ ಸಾ ಅಂತಾ ಹೇಳಿ, ರಂಗಸ್ವಾಮಯ್ಯನವರ ಮಡದಿ ಲಕ್ಷ್ಮಮ್ಮನವರು ತಲೆಗಾತ್ರದ ಮುದ್ದೆ, ಬಾಡಿನೆಸರು ಊಟಕ್ಕೆ ಇಟ್ಟಾಗ ಊಟ ಮಾಡುವಾಗ ಕಂಗಳಲ್ಲಿ ಎರಡು ಹನಿ ಕಣ್ಣೀರು ತಟ್ಟೆಗೆ ಬೀಳುತ್ತವೆ. ಹಸಿವಿನ ಸಂಕಟ ಇದರಿಂದ ಗೊತ್ತಾಗುತ್ತದೆ.

ದಲಿತರ ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳುವಲ್ಲಿ ಬಹುತೇಕ ಅವರನ್ನು ಕುಗ್ಗಿಸುವುದು ಜಾತಿಪ್ರಜ್ಞೆ ಅಥವಾ ಅಸ್ಪೃಶ್ಯತೆಯ ಪರಿ. ಅಸ್ಪೃಶ್ಯತೆ ದಲಿತ ಸಮುದಾಯವನ್ನು ಬೆನ್ನುಬಿಡದೆ ಕಾಡುವ ಬೂತಕಾರದ ಸಮಸ್ಯೆ, ಬುದ್ದ ಬಸವ, ಅಂಬೇಡ್ಕರ್ ಬಹುತೇಕರು ಈ ಸಮಸ್ಯೆಯನ್ನು ಬಗೆಹರಿಸಲುಎಷ್ಟೇ ಪ್ರಯತ್ನಿಸಿದರೂ ರಕ್ತ ಬೀಜಾಸುರನಂತೆ ಇದು ತನ್ನ ಪಡಿನೆಳಲನ್ನು ಬಿಂಬಿಸುತ್ತದೆ.

' ಜಾತಿಯ ಕಟ್ಟುಗಳು' ಎಂಬ ಭಾಗದಲ್ಲಿ ಅಸ್ಪೃಶ್ಯತೆಯ ಆಚರಣೆ ಕಾಣಬಹುದು. ಜೈನರ ಪಾರ್ಶ್ವನಾಥಪ್ಪ ಮತ್ತು ಜ್ಯೋತಮ್ಮನವರ ಮನೆಯಲ್ಲಿ ಅಂಗಡಿಗೆ ಸಾಮಾನು ಕೊಳ್ಳಲು ಹೋದಾಗ,ಇವರನ್ನು ಕಂಡಾಗ ತೊಣಚಿ ಹತ್ತಿದ ಹಸು ಎಗರಾಡುವಂತೆ, ಕೂಡಲೇ ಎಗರಾಡುತ್ತಿದ್ದರು. ಬಿದಿರು ಕೋಲಿಗೆ ತಟ್ಟೆಯನ್ನು ಸಿಕ್ಕಿಸಿ,ಕಿಟಕಿಯಿಂದಲೇ ವ್ಯಾಪಾರ ಕೊಡುವುದು, ಅವರ ಮಕ್ಕಳು ಇವರನ್ನು ಮುಟ್ಟಸಿಕೊಳ್ಳದೇ ನೋಡಿಕೊಳ್ಳುತ್ತಿದ್ದರು. ವೀರನಾಗಮ್ಮ, ವೀರಕ್ಯಾತಪ್ಪ ದೇವರುಗಳು ಬಹುತೇಕ ಮಣೆಗಾರರ ಕುಲದೇವತೆಯಾಗಿ ಆಚರಣೆಯಲ್ಲಿದ್ದವು.,ಅದರೂ ಈ ದೇವಾಲಯಗಳ ಪ್ರವೇಶ ಮಾಡಲು ದಲಿತ ಜನಾಂಗಕ್ಕೆ ಅವಕಾಶ ಇರಲಿಲ್ಲ ತಂದ ಪೂಜಾಸಾಮಾಗ್ರಿಗಳನ್ನು ಮೇಲ್ಜಾತಿಯವರಿಗೆ ಕೊಟ್ಟು ಅವರು ಪೂಜೆ ಮಾಡಿಸಿಕೊಂಡು ಬಂದ ಮೇಲೆ ತೆಗೆದುಕೊಳ್ಳಬೇಕು. ಅಂದರೆ ದೇವಸ್ಥಾನ ಪ್ರವೇಶದ ನಿಷೇಧ ಪ್ರಸಂಗ,ಮಣೆಗಾರರಿಗೆ ಮತ್ತು ಹೊಲೆಯರಿಗೆ ಪ್ರತ್ಯೇಕ ಬಾವಿಗಳಿರುವ ಪ್ರಸಂಗ, ಹೊಲೆಯರರ ಹೆಂಗಸ್ಸರು ಮಣೆಗಾರರ ಹಟ್ಟಿಗೆ ಕೂಲಿ ಆಳುಗಳನ್ನು ಕರೆಯಲು ಬರುವಾಗ ಕೆಂಡದ ಮೇಲೆ ನಡೆದು ಬರುವಂತೆಮಡಿಮೈಲಿಗೆಯ ಭಾವದಿಂದ ಬಂದು ಹೋಗುತ್ತಿದ್ದರು. ಎನ್ನು ಪ್ರಸಂಗಗಳು ಮತ್ತಷ್ಟು ಸೂಕ್ಷ್ಮವಾಗಿವೆ.ಅಸ್ಪೃಶ್ಯ ಸಮುದಾಯಗಳ ನಡುವೆ ಹುಟ್ಟಿಕೊಂಡ ಒಳಜಾತಿಯ ಪ್ರಜ್ಞೆ ಅಲ್ಲಿಯೇ ಇರುವ ಮೇಲುಕೀಳಿನ ಭಾವನೆಯು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯತೆಯ ಭಾವನೆಯು ಹೇಗೆ ಅದರ ಮೂಲೆಮೂಲೆಗೂ ವ್ಯಾಪಿಸಿಕೊಂಡಿದೆ ಎಂಬುದನ್ನು ಸೂಚಿಸುತ್ತದೆ.

ದಲಿತರನ್ನು ಮುಖ್ಯವಾಗಿ ಕಾಡುವ ಸಂಕಟದ ಸ್ಥಿತಿ ಎಂದರೆ' ಜಾತಿ ಯಾವುದು' ಎಂಬ ಪ್ರಶ್ನೆ, ತಾನು ಯಾರು? ಯಾವ ಜಾತಿ ಎಂದು ಮುಕ್ತವಾಗಿ ಎಲ್ಲರ ಸಮ್ಮುದಲ್ಲಿ ಯಾರಿಗೂ ಹೇಳಲಾಗದ ಸಂಧಿಗ್ದತೆಗೆ, ಇಬ್ಬಂದಿತನಕ್ಕೆ ಪ್ರತಿಯೊಬ್ಬ ದಲಿತರು ಬಹುತೇಕ ಕಡೆ ಒಳಗಾಗುವುದನ್ನು ಕಾಣಬಹುದು. ಯಾವುದೇ ಉನ್ನತ ಸ್ಥಾನದಲ್ಲಿ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ,ಔದ್ಯೋಗಿಕವಾಗಿ ಮುನ್ನಡೆಯಲ್ಲಿದ್ದರೂ ಅವರಿಗೆ ಜಾತಿ ಪ್ರಶ್ನೆ ಎದುರಾದಾಗ ಅವನನ್ನು ಹಿಂದಕ್ಕೆ ತಳ್ಳುತ್ತದೆ. ಮಣೆಗಾರ ರಾಮಯ್ಯನವರಿಗೆ ಬಹುತೇಕ ಕಡೆ ಈ ತರಹ ಆಗುವ ಅನುಭವವನ್ನು ಚಿತ್ರಿಸುತ್ತಾರೆ.

'ಮಣೆಗಾರ' ಕೃತಿಯಲ್ಲಿನ ಮತ್ತೊಂದು ಸಂಕಟ ಎಂದರೆ ಜೀವನ ಹಿಂಡುವ ಬಡತನದ ಚಿತ್ರಣ. ದಲಿತರ ಬದುಕಿನಲ್ಲಿ ಹಸಿವು ಮತ್ತು ಬಡತನ ಹಾಸುಹೊಕ್ಕಾಗಿದೆ. ನಮ್ಮ ದೇಸಕ್ಕೆ ಅಂಟಿದ ಶಾಪದಲ್ಲಿ ಬಡತನವು ಕೂಡ ಒಂದು. ಶ್ರೀಮಂತ ಶ್ರೀಮಂತನಾಗಿ, ಬಡವ ಬಡವನಾಗಿ ಇರುವ ಸಾಮಾಜಿಕ ಅಂತರವನ್ನು ಕಾಣಬಹುದಾಗಿದೆ. ಲೇಖಕರ ಕುಟುಂಬ ಕಡುಬಡತನದಿಂದ ಬದುಕು ಸಾಗಿಸುವ ಕುಟುಂಬ ಈತನ ತಂದೆ ಚಪ್ಪಲಿ ಹೊಲಿಯುವುದು, ಹಲಗೆ ಬಾರಿಸುವುದು, ಹಂದಿ ಮೇಯಿಸುವುದು ,ಎನೆಲ್ಲ ಕೆಲಸ ಮಾಡಿದರೂ ಹೊಟ್ಟೆ ತುಂಬುವುದಿಲ್ಲಸಾಲದ ಹೊರೆ ಇಳಿಯುವುದಿಲ್ಲ ರಾಮಯ್ಯ ಕೂಡ ರಜಾದಿನಗಳಲ್ಲಿ ಚಪ್ಪಲಿ ಹೊಲಿಯುವ, ಹಂದಿ ಕಾಯುವ, ಹಲಗೆ ಬಾರಿಸುವ ಕೆಲಸ ಮಾಡುವುದನ್ನು ಕಾಣಬಹುದು.

ದಲಿತರ ಬದುಕಿನಲ್ಲಿ ಎಷ್ಟೋ ಜನರಿಗೆ ಹೊಲ ಗದ್ದೆ ಮನೆ ಆಸ್ತಿಗಳಿಲ್ಲದೇ ಈ ಜನ ಜೀವನ ಸಾಗಿಸಲು, ಕತ್ತಾಳೆಯಿಂದ ನಾರು ತೆಗೆದು ಹಗ್ಗ ತಯಾರಿಸುವುದು, ಸತ್ತ ದನಗಳ ಚರ್ಮದಿಂದ ಕೃಷಿ ಸಲಕರಣೆಗಳನ್ನು ತಯಾರಿಸುವುದು, ಚರ್ಮವಾದ್ಯಗಳನ್ನು ತಯಾರಿಸಿ, ಮಾರಾಟ ಮಾಡಿತಮ್ಮ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಿದ್ದಾರೆ.

ಒಟ್ಟಾರೆಯಾಗಿ ' ಮಣೆಗಾರ' ಆತ್ಮಚರಿತ್ರೆ ದಲಿತರ ಬದುಕಿನ, ನೋವು,ದುಗುಡ,ಹಸಿವು, ಬಡತನ, ಹೊಸ ಬದುಕಿಗಾಗಿ ತುಡಿತದ ಚಿತ್ರಣ ಜೊತೆಗೆ ರಾಮಯ್ಯ ಎದುರಿಸಿದ ಅನೇಕ ಸಮಸ್ಯೆಗಳ ಸರಮಾಲೆ, ಇವುಗಳನ್ನು ಎದುರಿಸಲು ಸನ್ನದ್ಧವಾದ ಜಾಗೃತ ಪ್ರಜ್ಞೆ, ಇಡೀ ಸಮುದಾಯದ ಸಾಂಸ್ಕೃತಿಕತೆ ಮತ್ತು ಸಾಮಾಜಿಕ ಸಂಧಿಗ್ದತೆಯ ಹಲವು ಆಯಾಮಗಳನ್ನು ಚಿತ್ರಿಸಿದೆ.

ಪರಾಮರ್ಶನ ಗ್ರಂಥಗಳು:

೧.ಮಣೆಗಾರ- ತುಂಬಾಡಿ ರಾಮಯ್ಯ

೨. ಕನ್ನಡ ದಲಿತ ಸಾಹಿತ್ಯ ಸಮಾಲೋಕನ- ಡಾ.ಅರ್ಜುನ ಗೊಳಸಂಗಿ

೩. ಊರುಕೇರಿ- ಡಾ. ಸಿದ್ದಲಿಂಗಯ್ಯ

೪. ದಲಿತರು-ನಾ.ದಿವಾಕರ

೫. ದಲಿತ ಸಾಹಿತ್ಯ ಮತ್ತು ಸಂಸ್ಕೃತಿ- ಅರವಿಂದ ಮಾಲಗತ್ತಿ